# ಸಮುದ್ರ ಮಥನ

## ಕೆಲಸದ ಜಾಗದಲ್ಲಿ ಕಾಮಣ್ಣರು

ನೂರಾರು ಮಹಿಳೆಯರು ಆರ್ಥಿಕ ಸಂಕಷ್ಟವನ್ನು ತಾಳಲಾರದೆ ಉದ್ಯೋಗಕ್ಕೆ ಬರುತ್ತಾರೆ. ಅಂಥವರಿಗೆ ಇಂಥ ಕಾಮಣ್ಣರ ಕಿರುಕುಳ ಒಂದು ಶಾಪವೇ ಸರಿ. ಉದ್ಯೋಗದ ಸ್ಥಳದಲ್ಲಿ ಆಂತರಿಕ ಸಮಿತಿ ಬೇಕೇ ಬೇಕು. ಈ ಕುರಿತು ಇರುವ ಕಾನೂನು ಮತ್ತು ತೆಗೆದುಕೊಳ್ಳಬೇಕಾದ ಎಚ್ಚರಿಕೆಗಳ ಬಗ್ಗೆ ಫೆ.11ರ ಸಂಚಿಕೆಯಲ್ಲಿ ವಿವರವಾಗಿ ತಿಳಿಸಿದ ಸೌಮ್ಯಲಕ್ಷ್ಮಿ ಕುಕ್ಕಜೆ ಅವರ 'ಕೆಲಸದ ಜಾಗದ ಕಾಮಣ್ಣರು' ಲೇಖನ ನಿಜಕ್ಕೂ ಸಕಾಲಿಕ.

—ಶಶಿಕಲಾ ಆರ್. ಸ್ವಾಮಿ, ಬೆಂಗಳೂರು

ಈ ಲೇಖನ ಉದ್ಯೋಗದಲ್ಲಿರುವ ಎಲ್ಲ ಮಹಿಳೆಯರಿಗೂ ದಾರಿದೀಪವಾಗಿದೆ. ಕಾನೂನಿನ ಬಗ್ಗೆ ಅರಿವು ಮೂಡಿಸಿದ ಲೇಖಕರಿಗೆ ಧನ್ಯವಾದಗಳು.

—ನರಸಿಂಹ ರಾವ್, ಬೆಂಗಳೂರು

## ಗ್ರಾಮೀಣ ಆತ್ಮಬಲದ ಪಣ

ಫೆ. 4ರ ಸಂಚಿಕೆಯ 'ನಿಮ್ಮೊಡನೆ' ಪುಟದಲ್ಲಿ ಉದಯ್ ಕುಮಾರ್ ಅವರು ಬರೆದಿರುವ 'ಗ್ರಾಮೀಣ ಆತ್ಮಬಲವೃದ್ಧಿಗೆ ಪಣತೊಡಿ' ಲೇಖನ ಓದಿದೆ. ಜನಪ್ರತಿನಿಧಿಗಳ ಗ್ರಾಮವಾಸ್ತವ್ಯ ಇದೀಗ ಬದಲಾಗಿ ಅಧಿಕಾರಿಗಳು ಗ್ರಾಮೀಣ ಜನತೆಯ ಮನೆ ಬಾಗಿಲಿಗೆ ಸೇವೆ ಒದಗಿಸುವ ನೂತನ ಕಾರ್ಯಕ್ರಮ ಆರಂಭವಾಗಿದೆ. ಆಡಳಿತದಲ್ಲಿ ಇದೊಂದು ಚಾತುರ್ಯದ ಪ್ರಕ್ರಿಯೆಯೆಂದೇ ಹೇಳಬಹುದು. ಗ್ರಾಮೀಣ ಭಾಗದ ನಿವಾಸಿಗಳಿಗೆ ಇದಾವುದೂ ಹೊಸದಲ್ಲ. ಅವರು ಇದರಿಂದ ದಾರಿ ತಪ್ಪುವವರೂ ಅಲ್ಲ. ಸರ್ಕಾರಿ ಕಚೇರಿಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಲಂಚಕ್ಕೆ ಬೇಡಿಕೆ ಇಡುವ ಅಧಿಕಾರಿಗಳು ಕನಿಷ್ಠಪಕ್ಷ ಸಮಯೋಚಿತವಾಗಿ ಅರ್ಜಿ ವಿಲೇವಾರಿ ಮಾಡಿದರೆ ಸಾಕು. ಆತ್ಮಬಲ ವೃದ್ಧಿಯಾದಂತೆಯೇ!

—ರಾಜೀವ್ ಎನ್. ಮಾಗಲ್, ಹಾಸನ

## ಕ್ಯಾನ್ಸರ್ ಗೆದ್ದ ಸ್ಫೂರ್ತಿಕಥೆ



ಫೆ. 11ರ ಸಂಚಿಕೆಯಲ್ಲಿ ಪ್ರಕಟವಾದ ಗಾಯತ್ರಿಮೂರ್ತಿ ಅವರ 'ಕ್ಯಾನ್ಸರ್‌ನೊಂದಿಗೆ ಸೆಣಸಿದೆ ಗೆದ್ದುಬಂದೆ' ಲೇಖನವು ಬಹಳ ಆಶಾದಾಯಕ ಮತ್ತು ಉ ಪ ಯು ಕ್ತ ವಾ ದು ದಾ ಗಿ ದೆ . ಅವರ ಆತ್ಮವಿಶ್ವಾಸ, ಸಕಾರಾತ್ಮಕ ಚಿಂತನೆ ಮೆಚ್ಚುವಂತದ್ದು. ಗಾಯತ್ರಿಯವರು ಸಾಕಷ್ಟು ಮಾಹಿತಿಗಳನ್ನು, ಅನುಭವಗಳನ್ನು ಸುಂದರ ಬರವಣಿಗೆಯೊಂದಿಗೆ ಆತ್ಮೀಯವಾಗಿ ಹಂಚಿಕೊಂಡು ಉಪಕರಿಸಿದ್ದಾರೆ.

—ಆದಿವಾಲ ಗಂಗಮ್ಮ, ಬೆಂಗಳೂರು

## ಸಶಕ್ತ ಕಥೆ 'ಭಯೋತ್ಪಾದಕರು'

ಬಿ.ಎಲ್. ವೇಣು ಅವರು ಫೆ. 11ರ ಸಂಚಿಕೆಯಲ್ಲಿ ಬರೆದಿರುವ 'ಭಯೋತ್ಪಾದಕರು' ಕಥೆ, ಮರಾಠಿಯಲ್ಲಿ ಇತ್ತೀಚೆಗೆ ಬಂದು ಬಹಳ ಯಶಸ್ಸನ್ನು ಕಂಡ 'ಸೈರಾಟ್' ಚಿತ್ರದ ಕಥೆಯನ್ನು ನೆನಪಿಸುವಂತಿದೆ.

—ಚಂದನ್



ಇದು ಇತ್ತೀಚೆಗೆ ಕರ್ನಾಟಕದಲ್ಲಿ ಅಲ್ಲಿ ಇಲ್ಲಿ ಆಗಾಗ್ಗೆ ವರದಿಯಾಗುತ್ತಿರುವ 'ಮರ್ಯಾದಾ ಹತ್ಯೆ'ಯ ಪ್ರಕರಣಗಳ ಸ್ಫೂರ್ತಿಯಲ್ಲಿ ಬರೆದಿರುವ ಒಂದು ಸಶಕ್ತ ಕಥೆ! ಕತೆಗೆ ಪ್ರಸ್ತುತತೆ ತಂದುಕೊಟ್ಟಿರುವ ಲೇಖಕರಿಗೆ ಧನ್ಯವಾದಗಳು.

—ಜಿ. ರಾಜಣ್ಣ, ದಾವಣಗೆರೆ

ಈ ಕಥೆಯ ವಸ್ತು ಸಮಾಜದ ಹಳೆ ಸರಕು. ಪತ್ರಿಕೆಯಲ್ಲಿ ಒಂದಿಲ್ಲೊಂದು ಸುದ್ದಿ ಓದುತ್ತಲೇ ಇರುತ್ತೇವೆ. ಕೆಲವು ಕಡೆ ಹುಡುಕಿಕೊಂಡು ಹೋಗಿ ಹೊಡೆದುಹಾಕುತ್ತಾರೆ. ಇನ್ನು ಕೆಲವೆಡೆ ಮನೆಗೆ ಕರೆಸಿ ಹತ್ಯೆ ಮಾಡುತ್ತಾರೆ. ಗೌಡ ಮನೆಗೆ ಕರೆಸಿದಾಗಲೇ ಅಂತ್ಯ ಊಹಿಸಿರುತ್ತಾರೆ ಓದುಗರು.

—ಎನ್.ಎಸ್. ಚಂದ್ರಶೇಖರ್, ಬೆಂಗಳೂರು

ಗೌಡರಂಥ ಗೋಮುಖ ವ್ಯಾಘ್ರರು ಈಚೆಗೆ ಎಲ್ಲೆಡೆ ಕಾಣಬರುತ್ತಾರೆ. ಮರಾಠಿ ಚಿತ್ರ 'ಸೈರಾಟ್' ಕಥೆಯೇ ನೆನಪಿಗೆ ಬರುತ್ತದೆ. ಮರ್ಯಾದೆ ಹತ್ಯೆಗೆ ಈಡಾಗುವ ಅನೇಕ ಯುವಕ ಯುವತಿಯರ ಸಂಖ್ಯೆ ಹೆಚ್ಚಾಗಿದೆ. ನಿಜ ಜೀವನದ ಘಟನೆಯೇನೋ ಎನಿಸುವಷ್ಟರ ಮಟ್ಟಿಗೆ ಕಥೆಯ ಬರವಣಿಗೆ ನಿರೂಪಣೆಯಲ್ಲಿ ಲೇಖಕರು ಯಶಸ್ವಿಯಾಗಿದ್ದಾರೆ.

—ಸುಮನಾ

ಕಥೆಯ ಹಂದರ ಹಳೆಯದಾದರೂ ಅದನ್ನು ಹೊಸದೆನಿಸುವ ಹಾಗೆ ರೂಪಿಸುವ ಶೈಲಿ ಬಿ.ಎಲ್. ವೇಣು ಅವರಿಗಿದೆ. ಜಾತಿಯ ಪೆಡಂಭೂತದ ಮುಂದೆ ಕರುಳಬಳ್ಳಿಯೂ ಗಣನೆಗೆ ಬಾರದೇ ಹೋಗಿದ್ದು ಎಂತಹ ದುರಂತ.

—ಎಸ್. ರಾವ್

ಲೇಖನ ಮನಕಲಕುವಂತಿದೆ. ಈ ರೋಗದಿಂದ ತತ್ತರಿಸುತ್ತಿರುವ ಜೀವಿಗಳಿಗೆ ನಿಜವಾಗಿ ಜೀವನೋತ್ಸಾಹ ತುಂಬಬಲ್ಲ ಲೇಖನ. ಅವರ ಸಕಾರಾತ್ಮಕ ಚಿಂತನೆ, ಹೋರಾಟ, ಸಾಧಿಸಿದ ಗೆಲುವು ಆದರ್ಶಪ್ರಾಯವಾಗಿದೆ. ಸುಲಭವಾದ ಶೈಲಿಯಲ್ಲಿ ತನ್ನ ಅಂತರಂಗವನ್ನು ಬಿಚ್ಚಿಟ್ಟಿರುವ ಪರಿಯಂತೂ ಶ್ಲಾಘನೀಯ. ಅವರಿಗೆ ಆರೋಗ್ಯಪೂರ್ಣ ತುಂಬು ಜೀವನದ ಶುಭಹಾರೈಕೆಗಳು. ಅವರ ಯಶೋಗಾಥೆಯನ್ನು ಪ್ರಕಟಿಸಿದ 'ಸುಧಾ' ಪತ್ರಿಕೆಗೂ ಧನ್ಯವಾದಗಳು.

—ಟಿ.ಆರ್. ಉಷಾರಾಣಿ, ಮಂಗಳೂರು

## ಅರ್ಬುದ ತಾನೆಂಬ ವ್ಯಾಘ್ರನು

'ಅರ್ಬುದ ತಾನೆಂಬ ವ್ಯಾಘ್ರನು' ಉಮಾ ಅನಂತ್ ಅವರು ಬರೆದಿರುವ (ಫೆ11 ರ ಸಂಚಿಕೆ) ಮುಖಪುಟ ಲೇಖನ ಸಮಯೋಚಿತ. ಕ್ಯಾನ್ಸರ್ ದೇಹದ ಯಾವುದೇ ಭಾಗವನ್ನು ಬಾಧಿಸಬಹುದು. ಅದು ಪತ್ತೆಯಾಗುವುದರೊಳಗೆ, ಅದು ಎರಡನೇ ಅಥವಾ ಮೂರನೇ ಹಂತಕ್ಕೆ ತಲುಪಿರುತ್ತದೆ. ವೈದ್ಯರು ಎಷ್ಟೇ ತಿಳಿವಳಿಕೆ ಕೊಟ್ಟರೂ, ಕ್ಯಾನ್ಸರ್ ಎಂದು ತಿಳಿದ ತಕ್ಷಣ, ರೋಗಿಯು ಆತ್ಮವಿಶ್ವಾಸ ಕಳೆದುಕೊಳ್ಳುವುದು ಸಹಜ. ಸೂಕ್ತ ಎಚ್ಚರಿಕೆ ವಹಿಸುವುದರ ಜೊತೆಗೆ, ದೇಹದಲ್ಲಿ ಆಗುವ ಕೆಲವು ಬದಲಾವಣೆಗಳನ್ನು ವೈದ್ಯರಿಗೆ ತಿಳಿಸುವುದರ ಮೂಲಕ ಕ್ಯಾನ್ಸರ್‌ಗೆ ಮೂಲದಲ್ಲಿಯೇ ಚಿಕಿತ್ಸೆ ಪಡೆಯಬಹುದು. ಅಲ್ಲದೆ, ಕ್ಯಾನ್ಸರ್‌ಗೆ ಕಡಿಮೆ ವೆಚ್ಚದಲ್ಲಿ ಚಿಕಿತ್ಸೆ ಹಾಗೂ ಸುಲಭ ದರದಲ್ಲಿ ಔಷಧಗಳು ದೊರಕುವಂತೆ ಸರ್ಕಾರ ನೋಡಿಕೊಳ್ಳುವುದು ಮುಖ್ಯ.

—ಬಾಣಾವರ ನಾಗರಾಜ, ಬೆಂಗಳೂರು, ಸುಬ್ಬಲಕ್ಷ್ಮಿ ಹೆಚ್.ಕೆ. ಕೋಲಾರ, ಕೆ. ಹೊನ್ನಪ್ಪ ಕ್ಯಾತ್ಸಂದ್ರ

## ಅನ್ಯಗ್ರಹಜೀವಿಗಳೆಂಬ ಕುತೂಹಲದ ಖನಿ

ಫೆ. 11ನೇ ಸಂಚಿಕೆಯಲ್ಲಿ ಸುಧೀಂದ್ರ ಹಾಲ್ದೊಡ್ಡೇರಿ ಬರೆದಿರುವ 'ಈ ಪರಿಯಿಂದಲ್ಲಿ ಕರೆಯಬಂದವರು ಯಾರು?' ಲೇಖನ ಬಹಳ ವೈಜ್ಞಾನಿಕವಾಗಿದೆ. ಅನ್ಯಗ್ರಹ ಜೀವಿಗಳ ಬಗ್ಗೆ ತಿಳಿಸಿ ಸಾಕಷ್ಟು ಕುತೂಹಲವನ್ನುಂಟುಮಾಡಿದೆ.

—ಜಿ. ಸುಬ್ರಹ್ಮಣ್ಯ, ಬೆಂಗಳೂರು

## ಭೀಮಸೇನರ ಸ್ಮರಣೆ

ಭಾರತರತ್ನ ಪ್ರಶಸ್ತಿ ಪುರಸ್ಕೃತ ಪಂ. ಭೀಮಸೇನ ಜೋಷಿ ಅವರ ಜನ್ಮಶತಮಾನೋತ್ಸವ ಸಂದರ್ಭದಲ್ಲಿ ಅವರ ಸಂತವಾಣಿ ಹಾಗೂ ಹಿಂದೂಸ್ತಾನಿ ಸಂಗೀತ ಪಯಣದ ಸಮಗ್ರ ಚಿತ್ರಣವನ್ನು ಶೈಲಜಾ ಮತ್ತು ಟಿ.ಎಸ್. ವೇಣುಗೋಪಾಲ್ ಅವರ ಲೇಖನ (ಲೇ: ನಾದಲೋಲ ಭೀಮಸೇನ ಜೋಷಿ – ಫೆ. 11ರ ಸಂಚಿಕೆ) ನೀಡಿದೆ.

—ಪಿ. ಜಯವಂತ ಪೈ, ಕುಂದಾಪುರ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in